# ಚಿರಂಜೀವಿ



**ಕರೀಗೌಡ**

ಕಲೆ: ಎಸ್‌ವಿ. ಹೂಗಾರ್

ಕಚೇರಿಯ ಕರ್ತವ್ಯದ ವೇಳೆಯಲ್ಲಿ ದೂರವಾಣಿ ಕರೆಗಳೆಂದರೆ ಚಿದಂಬರನಿಗೆ ಕರ್ಕಶ ಶಬ್ದಗಳಂತೆ, ಏಕಾಗ್ರತೆಯ ಭಂಗ, ವಿಷಯಾಂತರದ ವಿಷಾದ ಭಾವ ಮೂಡುತ್ತದೆ. ಗೆಜೆಟೆಡ್ ಅಧಿಕಾರಿಯಾಗಿ ಸರ್ಕಾರದ ಮೇಲಧಿಕಾರಿಗಳ, ಸಾರ್ವಜನಿಕರ ಕರೆಗಳನ್ನು ನಿರ್ಲಕ್ಷಿಸುವಂತಿಲ್ಲ. ಕರೆಯನ್ನು ಸ್ವೀಕರಿಸದೇ ತನ್ನ ಹಕ್ಕುಚ್ಯುತಿಯಾಗಿದೆಯೆಂದು ಜನಪ್ರತಿನಿಧಿಯೊಬ್ಬರು ದೂರು ದಾಖಲಿಸಿದ್ದೂ ಉಂಟು. ಒಂದೇ ಸಮನೆ ರಿಂಗಣಿಸುತ್ತಿದ್ದ ಅನಾಮಧೇಯ ಕರೆಯನ್ನು ಸ್ವೀಕರಿಸಿ, ಸೌಜನ್ಯವಾಗಿ 'ಹಲೋ' ಎಂದ.

ಅತ್ತ ಕಡೆಯಿಂದ ಗ್ರಾಮೀಣ ಸೊಗಡಿನ ಕನ್ನಡದಲ್ಲೇ ಹೆಣ್ಣು ದನಿಯೊಂದು 'ನಮಸ್ಕಾರ ಸಾರ್. ತಮ್ಮ ಆಫೀಸ್‌ನಲ್ಲಿ ಕೆಲಸ ಮಾಡುವ ಆ ನನ್ಮಗ ಚಿರಂಜೀವಿ ನನ್ನ ಮಗಳಿಗೆ ನಿನ್ನೆ ತುಂಬಾ ಹೊಡೆದಿದ್ದಾನೆ. ತುಂಬಾ ಪೆಟ್ಟಾಗಿದೆ. ಆಸ್ಪತ್ರೆಗೆ ಸೇರಿಸಿದ್ದೀನಿ. ಆ ನನ್ಮಗನಿಗೆ ನೀವು ಸಸ್ಪೆಂಡ್ ಮಾಡಿ' ಎಂದಿತು.

ಅವರ ಮಗ ಮಗಳಿಗೇಕೆ ಹೊಡೆದ? ಅದಕ್ಕೂ ತನಗೂ ಏನು ಸಂಬಂಧ ಎಂದು ಚಿದಂಬರ ಯೋಚಿಸುತ್ತ,

'ನಿಮ್ಮ ಮಗನಿಗೆ ನೀವೇ ಸರಿಯಾಗಿ ಬುದ್ಧಿ ಹೇಳಿ, ಮಗಳಿಗೆ ಹೊಡೆಯದಂತೆ ತಿಳಿ ಹೇಳಿ' ಎಂದು ಮಾತು ಮುಗಿಸುವ ಮೊದಲೇ 'ಇಲ್ಲಾ ಸಾರ್, ಆ ಸೂಳೆ ಮಗ ನನ್ಮಗನಲ್ಲ, ನನ್ನ ಮಗಳ ಗಂಡ. ಅದಕ್ಕೆ ಆ ನನ್ಮಗ ಎಂದಿದ್ದು' ಎಂದು ಗೊಂದಲ ನಿವಾರಿಸಿದರು.

ಅತ್ತೆಯ ಸಿಟ್ಟು ನೆತ್ತಿಗೇರಿರುವುದನ್ನು ಅರಿತ ಚಿದಂಬರ ಸಮಾಧಾನಿಸಲು ನೋಡಿ, 'ನನ್ನ ಜೊತೆ ಮಾತನಾಡುವಾಗ ಅಸಭ್ಯ ಪದಗಳನ್ನು ಬಳಸಬಾರದು' ಎಂದ.

'ನಿಂಗೊತ್ತಿಲ್ಲ ಸಾರ್, ಹೆಣ್ಣು ಹೆತ್ತವರ ಕಷ್ಟ. ಆ ನನ್ಮಗನಿಗೆ ಮದುವೆ ಮಾಡಿ ನಾವು ಅನುಭವಿಸುತ್ತಿರುವ ಕಷ್ಟ' ಎಂದರು.

'ಏನು ಕಷ್ಟವಾಗಿದೆ. ನೀವು ನನ್ನ ಅಕ್ಕನ ತರಹ, ಸಾವಧಾನದಿಂದ ಹೇಳಿ' ಎಂದು ವಿಷಯ ಸೂಕ್ಷ್ಮತೆಯತ್ತ ಹೊರಳುತ್ತಿದ್ದುದನ್ನು ಆಲಿಸಲು, ನೋಡುತ್ತಿದ್ದ ಕಡತವನ್ನು ಮುಚ್ಚಿ ಮಾತಿಗಿಳಿದ. ಅಪರಿಚಿತ ಮಹಿಳೆಯರೊಂದಿಗಿನ ಮಾತುಕತೆಯಲ್ಲಿ ಅನುಕಂಪಕ್ಕೆ ಬಾಂಧವ್ಯ ಸೇರಿಸಿದ.

ಅದು ಸ್ವಲ್ಪ ಮಟ್ಟಿಗೆ ಫಲ ನೀಡಿತು. ಕಡಿಮೆಯಾದ ಆಕ್ರೋಶದಲ್ಲಿ ಮಾತು ಮುಂದುವರೆಸಿದ ಮಹಿಳೆ:

'ನಿಮ್ಮ ಆಫೀಸ್ನಲ್ಲಿ ಕೆಲ್ಸ ಮಾಡೋ ಚಿರಂಜೀವಿಗೆ ಇಪ್ಪತ್ತು ವರ್ಷದ ಹಿಂದೆ ನಮ್ಮ ಮಗಳ ಮದ್ವೆ ಮಾಡಿದ್ವಿ. ಸರ್ಕಾರಿ ಕೆಲಸ ಅಂತ ಅವಸರದಲ್ಲೇ ಮದುವೆಯಾಗಿ ಹೋಯ್ತು. ಈಗ ಹದಿನೆಂಟು ವರ್ಷದ ಪಿಯುಸಿ ಓದುವ ಮಗಳಿದ್ದಾಳೆ, ಚೆನ್ನಾಗಿ ಓದ್ತಾಳೆ. ಎಸ್ಸೆಲ್ಸಿಯಲ್ಲಿ ತೊಂಬತ್ತೆಂಟು ಪರ್ಸೆಂಟ್ ಮಾರ್ಕ್ಸ್. ಆದ್ರೆ ಆ ನನ್ಮಗ ಚಿರಂಜೀವಿ ದಿನಾ ಮನೇಲಿ ಗಲಾಟೆ, ಹೆಂಡ್ತಿ ಮಗಳ ಮೇಲೆ ಜಗಳ. ಮಗಳು ಇಲ್ಲಾಂದ್ರೆ ಹೆಂಡ್ತಿಗೆ ಹೊಡಿತಾನೆ ಸ್ವಾಮಿ.'

'ಯಾಕೆ ದಿನಾ ಗಲಾಟೆ ಜಗಳ?'

'ನಿಮ್ಮ ಸರ್ಕಾರದಲ್ಲಿ ಕಂಟ್ರೋಲ್ ಇಲ್ಲ. ದಿನಾ